2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 60/2015

| | | |
|---|---|---|
| ಸಾಕ್ಷಿದಾರರ ಹೆಸರು | - ಸುಹೀಲ್ | ಪಿಡಬ್ಲೂ -4 |
| ತಂದೆಯ ಹೆಸರು | - ಅಜಮತ್ | ಸಿಡಬ್ಲೂ - 12 |
| ವಯಸ್ಸು | - 50 ವರ್ಷ | |
| ಉದ್ಯೋಗ | - ಟಿಂಬರ್ ವ್ಯಾಪಾರ | |
| ವಾಸ ಸ್ಥಳ | - ಉಪ್ಪಳ್ಳಿ | |

ದಿನಾಂಕಃ 23.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನಾನು ಈ ಹಿಂದೆ ಚಿಕ್ಕಮಗಳೂರು ಜೈಲಿನಲ್ಲಿ ನೋಡಿದ್ದೇನೆ. ಮೃತ ಪ್ರತಿಭಾ ಜೈನ್ ಗೊತ್ತು. ಫ್ರಾಸಾ.1 ರವರು ಪ್ರತಿಭಾರವರ ತಂದೆ ಎಂದು ಗೊತ್ತು, ಆದರೆ ನನಗೆ ಅವರ ಪರಿಚಯವಿಲ್ಲ. ಚಾಸಾ.13 ನನ್ನ ಸ್ನೇಹಿತ. ಮೃತ 2 ನೇ ಆರೋಪಿ ಯಾರೆಂದು ನನಗೆ ಗೊತ್ತಿಲ್ಲ, ನಾನು ಆತನನ್ನು ನೋಡಿಲ್ಲ.

2. ದಿನಾಂಕ 01.09.2015 ರಂದು ಪ್ರತಿಭಾ ಜೈನ್ ಮೃತಪಟ್ಟಿದ್ದಾರೆ . ಆ ಸಮಯದಲ್ಲಿ ನಾನು ಮಸೀದಿಯಲ್ಲಿ ಇದ್ದೆನು. ಆಗ ಚಾಸಾ.13 ರವರು ನನ್ನೊಂದಿಗೆ ಇದ್ದರು. ನಾವು ಮಸೀದಿಯಿಂದ ಹೊರಗೆ ಬಂದಾಗ ಚಾಸಾ.13 ರವರಿಗೆ ಪ್ರತಿಭಾ ಜೈನ್ ರವರ ಮಗಳು ಸೋನಲ್ ಫೋನ್ ಮಾಡಿ ಪ್ರತಿಭಾ ಅವರ ಮನೆಯಲ್ಲಿ ನೇಣು ಹಾಕಿಕೊಂಡಿರುವುದಾಗಿ ತಿಳಿಸಿದಳು. ಆ ರೀತಿ ಫೋನ್ ಬಂದಾಗ ಸಮಯ ಮಧ್ಯಾಹ್ನ 2.15 ಗಂಟೆಯಿಂದ 2.30 ಗಂಟೆಯಾಗಿತ್ತು. ಕೂಡಲೇ ನಾನು

ಪ್ರತಿಭಾ ಜೈನ್ ರವರ ಮನೆಗೆ ಹೋದೆನು. ನಾನು ಅಲ್ಲಿಗೆ ಹೋದಾಗ ಸಮಯ ಮಧ್ಯಾಹ್ನ 3.00 ಗಂಟೆಯಾಗಿತ್ತು. ಆ ದಿನ ಬೆಳಿಗ್ಗೆ ಪ್ರತಿಭಾ ಜೈನ್ ರವರು ನನಗೆ ಸಿಕ್ಕಿದ್ದರು. ಆ ದಿನ ವಿಜಯಪುರ ಮುಖ್ಯ ರಸ್ತೆಯಲ್ಲಿರುವ ನನ್ನ ಅಂಗಡಿಯ ಮುಂಭಾಗದಲ್ಲಿ ಪ್ರತಿಭಾ ಜೈನ್ ರವರು ನನಗೆ ಸಿಕ್ಕಿದ್ದರು. ಆ ಸಮಯದಲ್ಲಿ ಅವರು ಮುನಿಸಿಪಾಲಿಟಿ ಹೋಗುತ್ತಿದ್ದರು. ಆಗ ಅವರು ನನ್ನನ್ನು ಕುರಿತು ದುಡ್ಡು ಇದ್ದರೇ ಕೊಡು ಎಂದು ಕೇಳಿದರು ಆಗ ನಾನು ಈಗ ಇಲ್ಲ ಡ್ರಾ ಮಾಡಿಕೊಂಡು ಬಂದು ಕೊಡುತ್ತೇನೆ ಎಂದು ಹೇಳಿದೆನು.

3. ನಂತರ ನಾನು ಮನೆಗೆ ಹೋಗಿ ಸ್ನಾನ ಮಾಡಿಕೊಂಡು, ಹಣವನ್ನು ಡ್ರಾ ಮಾಡಿಕೊಂಡು ಮಧ್ಯಾಹ್ನ 1.15 ಗಂಟೆಗೆ ಪ್ರತಿಭಾ ಜೈನ್ ರವರ ಮನೆಗೆ ಹೋಗಿ ಅವರ ಮನೆಯ ಮುಂದೆ ಸ್ಕೂಟರನ್ನು ನಿಲ್ಲಿಸಿ ಹಾರ್ನ್ ಮಾಡಿದೆನು. ಆಗ ಪ್ರತಿಭಾ ಜೈನ್ ರವರು ಮನೆಯ ಹೊರಗೆ ಬಂದು ಗೇಟನ್ನು ತೆಗೆದು ನನ್ನಿಂದ ಹಣವನ್ನು ಪಡೆದುಕೊಂಡು ಮನೆಯ ಒಳಗೆ ಹೋದರು. ಆ ಸಮಯದಲ್ಲಿ ಪ್ರತಿಭಾ ಜೈನ್ ರವರ ಮನೆಯಲ್ಲಿ ಜನರಿದ್ದರು, ಆದರೆ ಎಷ್ಟು ಜನರಿದ್ದರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಪ್ರತಿಭಾ ಜೈನ್ ರವರ ಮನೆಯ ಹಾಲಿನಲ್ಲಿದ್ದ ಒಂದು ಚೇರು ಅವರ ಗೇಟಿನ ಹತ್ತಿರದಿಂದ ನೋಡಿದರೆ ಕಾಣಿಸುತ್ತಿತ್ತು. ಸದರಿ ಚೇರಿನಲ್ಲಿ ಒಬ್ಬ ವ್ಯಕ್ತಿ ಕೂತಿದ್ದನು. ಪ್ರತಿಭಾ ಜೈನ್ ರವರ ಸಾವಿನ ವಿಚಾರ ತಿಳಿದು ನಾನು ಅವರ ಮನೆಯ ಹತ್ತಿರ ಹೋದಾಗ ಜನರು ಮತ್ತು ಬಸವನಹಳ್ಳಿ ಪೊಲೀಸರು ಅಲ್ಲಿ ಸೇರಿದ್ದರು. ಆ ಸಮಯದಲ್ಲಿ ಸದರಿ ಜನರು ಮತ್ತು ಪೊಲೀಸರು ಪ್ರತಿಭಾ ಜೈನ್ ರವರ ಮನೆಗೆ ಹೋಗಿ ಬಂದು ಮಾಡುತ್ತಿದ್ದರು. ಅದೇ ರೀತಿ

ನಾನು ಸಹ ಅವರ ಮನೆಯ ಒಳಗೆ ಹೋಗಿ ನೋಡಿದ್ದೇನೆ. ನಾನು ನೋಡಿದಾಗ ಪ್ರತಿಭಾ ಜೈನ್ ರವರ ಮನೆಯ ಹಾಲಿನ ಪಕ್ಕದಲ್ಲಿದ್ದ ಒಂದು ರೂಮಿನಲ್ಲಿ ಅವರ ಶವ ಫ್ಯಾನಿಗೆ ನೇತು ಹಾಕಿಕೊಂಡಿದ್ದ ಸ್ಥಿತಿಯಲ್ಲಿ ಇತ್ತು. ಆ ಸಮಯದಲ್ಲಿ ಆಕೆಯ ಶವದ ಮೇಲೆ ಮತ್ತು ಸ್ಥಳದಲ್ಲಿ ನನಗೆ ಬೇರೆ ಏನು ಕಂಡು ಬಂದಿಲ್ಲ.

4. ಅದಾದ 2-3 ತಿಂಗಳ ಬಳಿಕ ಬಸವನಹಳ್ಳಿ ಪೊಲೀಸರು ನನ್ನನ್ನು ಅವರ ಠಾಣೆಗೆ ಕರೆಸಿದ್ದರು. ಆ ಸಮಯದಲ್ಲಿ ಪೊಲೀಸರು ಒಂದು ಕೆಂಪು ಬಣ್ಣದ ಬೈಕನ್ನು ತೋರಿಸಿದರು ಆದರೆ ನನಗೆ ಅದರ ಗುರುತು ಸಿಗಲಿಲ್ಲ. ಆ ಸಮಯದಲ್ಲಿ ಪೊಲೀಸರು ಯಾವುದೋ ಹೆಸರನ್ನು ಬರೆದಿದ್ದ ಲಾಕೆಟನ್ನು ಒಳಗೊಂಡ ಒಂದು ಚಿನ್ನದ ಸರವನ್ನು ನನಗೆ ತೋರಿಸಿದರು. ನಾನು ಸದರಿ ಸರವನ್ನು ಗುರುತಿಸಿ ಅದು ಪ್ರತಿಭಾ ಜೈನ್ ರವರದ್ದು ಎಂದು ತಿಳಿಸಿದ್ದೇನೆ. ಸದರಿ ಸರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.1 ಮತ್ತು ಮು.ಮಾ.2 ಎಂದು ಗುರುತಿಸಲ್ಪಟ್ಟಿರುವ ಬಂಗಾರದ ಚೈನ್ ಮತ್ತು ಡಾಲರನ್ನು ನೋಡಿ ಗುರುತಿಸಿರುತ್ತಾರೆ.

5. ಆ ಸಮಯದಲ್ಲಿ ಪೊಲೀಸರು ನನ್ನನ್ನು ಕುರಿತು ಬೇರೆ ಏನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಬೇರೆ ಏನನ್ನೂ ತಿಳಿಸಿಲ್ಲ. ಆದರೆ ಆ ದಿನ ಪ್ರತಿಭಾ ಜೈನ್ ರವರ ಕೊಲೆಯಾಗಿರುವುದಾಗಿ ಪೊಲೀಸರು ತಿಳಿಸಿದರು. ಆದರೆ ಯಾರು ಆಕೆಯ ಕೊಲೆಯನ್ನು ಮಾಡಿದ್ದಾರೆಂದು ನನಗೆ ತಿಳಿದುಬಂದಿಲ್ಲ.

6. ಅದಾದ ಸ್ವಲ್ಪ ದಿನಗಳ ನಂತರ ಬಸವನಹಳ್ಳಿ ಪೊಲೀಸರು ಚಿಕ್ಕಮಗಳೂರು ಜೈಲಿಗೆ ಮೇಲೆ ಹೇಳಿದಂತೆ ಘಟನಾ ದಿನ ನಾನು ಮಧ್ಯಾಹ್ನ 1.15 ಗಂಟೆಗೆ ಪ್ರತಿಭಾ ಜೈನ್ ರವರ ಮನೆಯ ಹತ್ತಿರ ಹೋಗಿದ್ದಾಗ ಅವರ ಮನೆಯಲ್ಲಿ ನೋಡಿದ ವ್ಯಕ್ತಿಗಳನ್ನು ಗುರುತಿಸುವ ಸಲುವಾಗಿ ಕರೆಸಿದ್ದರು. ನಾನು ಆ ದಿನ ಸದರಿ ಜೈಲಿಗೆ ಹೋದಾಗ ಸಮಯ ಮಧ್ಯಾಹ್ನ 2.00 ಗಂಟೆಯಾಗಿತ್ತು. ಅಲ್ಲಿ ಜೈಲಿನ ಸಿಬ್ಬಂದಿಗಳು ಮತ್ತು ತಹಶೀಲ್ದಾರ್ ರವರು ಇದ್ದರು. ಅಲ್ಲಿ ತಹಶೀಲ್ದಾರ್ ರವರು 9-10 ಜನರನ್ನು ನಿಲ್ಲಿಸಿ ಅವರ ಪೈಕಿ ಮೇಲೆ ಹೇಳಿದಂತೆ ನಾನು ಪ್ರತಿಭಾ ಜೈನ್ ರವರ ಮನೆಯಲ್ಲಿ ನೋಡಿದ ವ್ಯಕ್ತಿಯನ್ನು ಗುರುತಿಸುವಂತೆ ಕೇಳಿದರು. ಆ ದಿನ ನಾನು ಪ್ರತಿಭಾ ಜೈನ್ ರವರ ಮನೆಯಲ್ಲಿ ನೋಡಿದ ವ್ಯಕ್ತಿ ದಪ್ಪ ತೋಳು ಮತ್ತು ಉದ್ದ ಕೂದಲು ಉಳ್ಳವನಾಗಿದ್ದನು. ಅದರ ಆಧಾರದ ಮೇರೆಗೆ ನಾನು ಆ ದಿನ ಈಗ ನ್ಯಾಯಾಲಯದಲ್ಲಿ ಹಾಜರಿರುವ 1 ನೇ ಆರೋಪಿಯನ್ನು ನೋಡಿ ಆ ದಿನ ಪ್ರತಿಭಾ ಜೈನ್ ರವರ ಮನೆಯಲ್ಲಿ ನಾನು ನೋಡಿದ ವ್ಯಕ್ತಿ ಆತ ಇರಬಹುದು ಎಂದು ಗುರುತಿಸಿದ್ದೇನೆ. ಅದೇ ರೀತಿ ಮೂರು ಬಾರಿ 1 ನೇ ಆರೋಪಿಯನ್ನು ನೋಡಿ ಗುರುತಿಸಿ ಆತ ಇರಬಹುದು ಎಂದು ತಿಳಿಸಿದ್ದೇನೆ. ನಂತರ ತಹಶೀಲ್ದಾರ್ ರವರು ನನ್ನ ಸಹಿಗಳನ್ನು ಪಡೆದುಕೊಂಡರು.

7. ಸಾಕ್ಷಿಯು 1 ನೇ ಆರೋಪಿಯ ಗುರುತಿನ ಕವಾಯಿತನ ಮೆಮೋರಂಡಮ್ ಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ಮೆಮೋರಂಡಮ್ ಗಳನ್ನು ಕ್ರಮವಾಗಿ ನಿಪಿ.11 ಮತ್ತು ನಿಪಿ.12 ಎಂದು ಅವುಗಳಲ್ಲಿರುವ ಸಾಕ್ಷಿಯ

ಸಹಿಗಳನ್ನು ನಿಪಿ.11(ಎ) ಮತ್ತು ನಿಪಿ.12(ಎ) ಎಂದು ಗುರುತಿಸಲಾಯಿತು.

8. ಸಾಕ್ಷಿಗೆ ನಿಪಿ.3 ರಿಂದ ನಿಪಿ.7 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ನಾನು ನೋಡಿದಾಗ ಪ್ರತಿಭಾ ಜೈನ್ ರವರ ಶವ ನೇಣು ಹಾಕಿಕೊಂಡ ಸ್ಥಿತಿಯಲ್ಲಿರುವ ಕಂಡು ಬರುತ್ತದೆ.  ಈ ಪ್ರಕರಣದ ಬಗ್ಗೆ ನನಗೆ ಬೇರೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

9. ನೀವು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಪ್ರತಿಭಾ ಜೈನ್ ರವರ ಮನೆಯ ಹತ್ತಿರ ಘಟನೆಯ ದಿನ ಮಧ್ಯಾಹ್ನ 1.20 ಗಂಟೆಗೆ ಹೋಗಿದ್ದಾಗ ಅಲ್ಲಿ ಅವರ ಮನೆಯ ಮುಂದೆ ಎಂ ಹೆಚ್ ರಿಜಿಸ್ಟರೇಷನ್ ನ ಒಂದು ಕೆಂಪು ಬಣ್ಣದ ಮೋಟಾರ್ ಬೈಕ್ ನಿಂತಿದ್ದಾಗಿ ತಿಳಿಸಿದ್ದೀರಿ ಎಂದರೆ ಸರಿಯಲ್ಲ.  ಸಾಕ್ಷಿಯ ಹೇಳಿಕೆಯ ಸದರಿ ಭಾಗವನ್ನು ನಿಪಿ.13 ಎಂದು ಗುರುತಿಸಲಾಯಿತು. ನೀವು ಮನೆಯ ಒಳಗೆ ಹೋಗಿ ನೋಡಿದಾಗ ಪ್ರತಿಭಾಳ ಕುತ್ತಿಗೆಯಲ್ಲಿ ಒತ್ತಿದ ಮತ್ತು ಮುಖದಲ್ಲಿ ಅಲ್ಲಲ್ಲಿ ತರಚಿದ ಗಾಯಗಳು ಕಂಡು ಬಂದಿದ್ದಾಗಿ, ಮನೆಯ ಒಳಗಡೆ ಅಲ್ಲಲ್ಲಿ ಕೂದಲು ಬಿದ್ದಿದ್ದಾಗಿ ತಿಳಿಸಿದ್ದೀರಿ ಎಂದರೆ ಸಾಕ್ಷಿ ಆಕೆಯ ಮುಖದ ಮೇಲೆ ಗಾಯಗಳು ಕಂಡು ಬಂದಿದ್ದಾಗಿ ತಿಳಿಸಿದ್ದೇನೆ ಆದರೆ ಉಳಿದ ವಿಚಾರಗಳನ್ನು ತಿಳಿಸಿಲ್ಲ ಎನ್ನುತ್ತಾರೆ.

ಸಾಕ್ಷಿಯ ಹೇಳಿಕೆಯ ಸದರಿ ಭಾಗವನ್ನು ನಿಪಿ.13(ಎ) ಎಂದು ಗುರುತಿಸಲಾಯಿತು.

10. ನೀವು ಮು.ಮಾ.1 ಮತ್ತು ಮು.ಮಾ.2 ಅನ್ನು ಪೊಲೀಸ್ ಠಾಣೆಯಲ್ಲಿ ನೋಡಿ ಗುರುತಿಸಿದ ದಿನ ಪೊಲೀಸರಿಂದ ವಿಚಾರ ತಿಳಿಯಲಾಗಿ ಪ್ರತಿಭಾಳ ಸಂಬಂಧಿಯಾದ 1 ನೇ ಆರೋಪಿ ತನ್ನ ಸ್ನೇಹಿತನಾದ 2 ನೇ ಆರೋಪಿ ಸೇರಿ ಪ್ರತಿಭಾಳನ್ನು ಕೊಲೆ ಮಾಡಿ ಆಕೆಯ ಕೊರಳಿನಲ್ಲಿದ್ದ ಮು.ಮಾ.1 ಮತ್ತು 2 ಅನ್ನು ತೆಗೆದುಕೊಂಡು ಹೋಗಿದ್ದಾಗಿ ತಿಳಿದುಬಂದಿದ್ದಾಗಿ ಆ ದಿನ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೀರಿ ಎಂದರೆ ಸಾಕ್ಷಿ ಯಾರೋ ಇಬ್ಬರು ವ್ಯಕ್ತಿಗಳು ಆಕೆಯನ್ನು ಕೊಲೆ ಮಾಡಿದ್ದಾಗಿ ತಿಳಿಸಿದರು ಆದರೆ ಅವರ ಹೆಸರುಗಳು ನನಗೆ ಅಷ್ಟಾಗಿ ಗೊತ್ತಿಲ್ಲ. ಸಾಕ್ಷಿಯ ಹೇಳಿಕೆಯ ಸದರಿ ಭಾಗವನ್ನು ನಿಪಿ.14 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u>

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್